C.R.P.67

| Form No.4 (Civil) Deposition Sheets (R.P.No.57) |
|---|

## 1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

## ಎಸ್.ಸಿ. ನಂ.115/2021

ದಿನಾಂಕಃ 27.07.2022 ರಂದು ಪ್ರಮಾಣ ವಚನ ಬೋಧಿಸಲಾಗಿದೆ

ಸಿ. ಡಬ್ಲ್ಯೂ:2 ಪಿ. ಡಬ್ಲ್ಯೂ:1

| | |
|---|---|
| ಸಾಕ್ಷಿದಾರರ ಹೆಸರು | ಸತೀಶ |
| ತಂದೆಯ ಹೆಸರು | ರಾಮೇಗೌಡ |
| ವಯಸ್ಸು | 40 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ಕೃಷ್ಣಪುರ |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ಚಾಸಾ.1 ಗೊತ್ತು, ಅವರು ನಮ್ಮ ಊರಿನವರು. ಚಾಸಾ.3 ನನ್ನ ತಾಯಿ . ಚಾಸಾ.4 ರಿಂದ 6 ಗೊತ್ತಿಲ್ಲ. ಆರೋಪಿ ಗೊತ್ತು , ಆರೋಪಿ ನನ್ನ ಅಣ್ಣನ ಮಗ. ಆರೋಪಿ ಬೆಂಗಳೂರಿನಲ್ಲಿ ವಾಸ ಇರುತ್ತಾನೆ. ಊರಿನಲ್ಲಿ ನಮ್ಮ ಮನೆಯಲ್ಲಿ ನಾನು ಮತ್ತು ನಮ್ಮ ತಾಯಿ ವಾಸ ಇದ್ದೇವೆ. ನಮ್ಮ ಕುಟುಂಬದ ಆಸ್ತಿ ಕೃಷ್ಣಪುರದಲ್ಲಿ ಇದೆ. ಜಮೀನಿನಲ್ಲಿ ತೆಂಗಿನಕಾಯಿ ಬೆಳೆದಿದ್ದೇವೆ. ನಮ್ಮ ಕುಟುಂಬಕ್ಕೂ ಹಾಗೂ ಆರೋಪಿ ಕುಟುಂಬಕ್ಕೂ ಆಸ್ತಿಯಲ್ಲಿ ವಿಭಾಗ ಆಗಿರುವುದಿಲ್ಲ. ಆರೋಪಿ ಜಮೀನಿನಲ್ಲಿ ಭಾಗ ಕೊಡಿ ಅಂತ ನಮ್ಮ ತಾಯಿಯನ್ನು ಕೇಳುತ್ತಿದ್ದನು. ಆರೋಪಿ, ಭಾಗ ಕೇಳುತ್ತಿದ್ದಾರೆ ಅಂತ ನಾನು ಮತ್ತು ನನ್ನ ತಾಯಿ ಚಾಸಾ.1 ರವರಿಗೆ ತಿಳಿಸಿದ್ದೇವೆ. ಆರೋಪಿ ಕೃಷ್ಣಪುರಕ್ಕೆ ಅವರಿಗೆ ಬೇಕಾಗಿದ್ದಾಗ ಬಂದು ಹೋಗುತ್ತಾನೆ, ತೋಟದಿಂದ ತೆಂಗಿನಕಾಯಿ ತೆಗೆದುಕೊಂಡು ಹೋಗುತ್ತಾನೆ. ನಾನು, ಆರೋಪಿಗೆ ಕಾಯಿಯನ್ನು ತೆಗೆದುಕೊಂಡು ಹೋಗುವ ಬಗ್ಗೆ ಏನು ಕೇಳಿರಲಿಲ್ಲ.

2 ವರ್ಷಗಳ ಹಿಂದೆ ಸಂಜೆ 5.00 ಗಂಟೆ ಮೇಲೆ ಆರೋಪಿ, ದೇವಸ್ಥಾನಕ್ಕೆ ಕಾಯಿ ಬೇಕು ಅಂತ ಬಂದು ನನ್ನನ್ನು ಕೇಳಿದರು, ತೋಟದಿಂದ ಕಾಯಿಗಳನ್ನು ಕಿತ್ತುಕೊಂಡು ಹೋಗಿ ಅಂತ ಆರೋಪಿಗೆ ಹೇಳಿದೆನು. ಆರೋಪಿ ತೆಂಗಿನ ಮರದಲ್ಲಿ ಎಲ್ಲಾ ಕಾಯಿಗಳನ್ನು ಕೀಳುತ್ತಿದ್ದನು, ನಾನು ಯಾಕೆ ಎಲ್ಲಾ ಕಾಯಿಗಳನ್ನು ಕೀಳುತ್ತಿದ್ದೀಯಾ ಎಂದು ಕೇಳಿದೆನು. ಆರೋಪಿ 120 ತೆಂಗಿನ ಕಾಯಿಗಳನ್ನು ಕಿತ್ತಿದ್ದನು, ನಾನು ಅವುಗಳನ್ನು ನನ್ನ ಮನೆಗೆ ತೆಗೆದುಕೊಂಡು ಹೋಗಿ ಹಾಕಿದೆನು. ರಾತ್ರಿ ಸುಮಾರು 12.00 ಗಂಟೆಯಲ್ಲಿ ನಾನು ಮನೆಯಲ್ಲಿ ಇದ್ದೆ , ಆಗ ಆರೋಪಿ ಮನೆ ಹತ್ತಿರ ಬಂದು ಕೆಟ್ಟದ್ದಾಗಿ ಬಾಗಿಲು ತೆಗೆಯೋ ಎಂದು ಬೈಯುತ್ತಿದ್ದನು, ನಾನು ಬಾಗಿಲನು ತೆಗೆದೆನು, ಆರೋಪಿ ಓಡಿಬಂದು ಕುಡುಗೋಲನ್ನು ನನ್ನ ಕುತ್ತಿಗೆಗೆ ಬೀಸಿದಾಗ, ನಾನು ನನ್ನ ಕೈಯನ್ನು ಅಡ್ಡ ಕೊಟ್ಟಿದ್ದಾಗ, ಕುಡುಗೋಲಿನಿಂದ ನನ್ನ ಬಲಗೈಗೆ ರಕ್ತಗಾಯವಾಯಿತು. ಆರೋಪಿ ಕುಡುಗೋಲನ್ನು ನನ್ನ ತಲೆಗೂ ಬೀಸಿದನು, ನನ್ನ ಹಣೆಗೆ ಗಾಯವಾಯಿತು. ಮನೆ ಹತ್ತಿರ ಇದ್ದ ಚಾಸಾ.1 ಬೋರೇಗೌಡರನ್ನು ಎಬ್ಬಿಸಿದೆ. ಚಾಸಾ.1 ಆಂಬ್ಯೂಲೆನ್ಸ್ ಅನ್ನು ತರಿಸಿ ಆದಿಚುಂಚನಗಿರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಆಮೇಲೆ ನನ್ನನ್ನು ಬೆಂಗಳೂರಿನ ಲಕ್ಷ್ಮಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗೆ ಕರೆದುಕೊಂಡು ಹೋದರು, ಶಂಕರ ಮತ್ತು ಮೂರ್ತಿ ಕೂಡ ಬಂದಿದ್ದರು. ನಾನು ಲಕ್ಷ್ಮಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ 15 ದಿವಸ ಒಳರೋಗಿಯಾಗಿ ಇದ್ದೆನು. ಪೊಲೀಸರು ಆಸ್ಪತ್ರೆಗೆ ಬಂದಿದ್ದರು. ನಾನು ಘಟನೆ ಬಗ್ಗೆ ಹೇಳಿದ್ದನು ಪೊಲೀಸರು ಬರೆದುಕೊಂಡರು. ಅದಕ್ಕೆ ನಾನು ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದೇನೆ. ಈಗ ಆ ದಾಖಲೆಯನ್ನು ನೋಡುತ್ತಿದ್ದು ಅದನ್ನು ನಿಪಿ.1 ಎಂದು ಗುರುತಿಸಲಾಯಿತು. ನನಗೆ ಹಲ್ಲೆ ಮಾಡಿದ ಕುಡುಗೋಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಒಂದು ಕುಡುಗೋಲನ್ನು ನೋಡಿ ಅದನ್ನು ಆರೋಪಿ ಕಾಯಿ ಕೀಳಲು ಬಳಸಿದ್ದನು , ಅದರಿಂದ ನನಗೆ ಹೊಡೆದಿರಲಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಯು ಮುಂದುವರಿದು ನನಗೆ ಹಲ್ಲೆ ಮಾಡಿದ ಕುಡುಗೋಲು ಬೇರೆಯದ್ದಾಗಿರುತ್ತದೆ ಎಂದು ಹೇಳುತ್ತಾರೆ. ನಾನು ಆ ದಿವಸ ಹಾಕಿಕೊಂಡಿದ್ದ ಬಟ್ಟೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ಶರ್ಟ್ ಬಟ್ಟೆಯನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು. ಸಾಕ್ಷಿಯು ಬರ್ಮುಡಾ ಬಟ್ಟೆಯನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ.2 ಎಂದು ಗುರುತಿಸಲಾಯಿತು.

ಆರೋಪಿ, ನನ್ನನ್ನು ಸಾಯಿಸಬೇಕು ಎಂಬ ಉದ್ದೇಶದಿಂದ ಕುಡುಗೋಲನ್ನು ನನ್ನ ಕತ್ತಿಗೆ ಬೀಸಿದನು.

<u>ಪಾಟೀ ಸವಾಲುಃ</u> ಆರೋಪಿಯ ವಕೀಲರು, ಕಲಂ 231(2) ಸಿ.ಆರ್.ಪಿ.ಸಿ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ಸದರಿ ಸಾಕ್ಷಿಯ ಪಾಟೀ ಸವಾಲನ್ನು ಇತರೆ ಸಾಕ್ಷಿದಾರರ ಪಾಟೀ ಸವಾಲಿನೊಂದಿಗೆ ಒಂದೇ ದಿವಸ ಮಾಡುವುದಾಗಿ ತಿಳಿಸಿ , ಪಾಟೀ ಸವಾಲಿಗೆ ಸಮಯವನ್ನು ಕೋರಿರುತ್ತಾರೆ. ರೂ. 200 Cost ಅನ್ನು ವಿಧಿಸಿ ಸಮಯವನ್ನು ನೀಡಲಾಯಿತು.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.

<u>ದಿನಾಂಕಃ 14.09.2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ , ಪ್ರಮಾಣ ವಚನ ಬೋದಿಸಲಾಗಿದೆ</u>

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್.ಎಂ. ವಕೀಲರಿಂದಃ</u>

ಚಾಸಾ.1 ಪಿರ್ಯಾದಿ ನನ್ನ ದೊಡ್ಡಪ್ಪ. ನನ್ನ ತಾಯಿ ಚಾಸಾ.3 ಬೆಂಗಳೂರಿನಲ್ಲಿ ವಾಸ ಇದ್ದಾರೆ ಎಂದರೆ ಸರಿ. ನಾನು ನನ್ನ ತಾಯಿ ಜೊತೆಯಲ್ಲಿ ಬೆಂಗಳೂರಿನಲ್ಲಿ ವಾಸ ಇದ್ದೇನೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಹೇಳುತ್ತಾರೆ ನಾನು ಬೆಂಗಳೂರಿನಿಂದ ಹೋಗಿ ಬಂದು ಮಾಡಿಕೊಂಡಿದ್ದೇನೆ ಎಂದು. ನಾನು ಮತ್ತು ನನ್ನ ತಾಯಿ ಬೆಂಗಳೂರಿನಲ್ಲಿರುವ ಮೂಕಾಂಬಿಕ ನಗರದಲ್ಲಿ ವಾಸವಿದ್ದೇವೆ. ನಾನು ಮತ್ತು ನನ್ನ ತಾಯಿಯ ಆಧಾರ್ ಕಾರ್ಡ್ ನ ವಿಳಾಸ ಮೂಕಾಂಬಿಕ ಊರಿನದು ಎಂದರೆ ಸಾಕ್ಷಿಯು, ನನ್ನ ತಾಯಿಯ ಆಧಾರ್ ಕಾರ್ಡ್ ನ ವಿಳಾಸ

ಮೂಕಾಂಬಿಕ ಊರಿನದು ಇದೆ ಹಾಗೂ ನನ್ನ ಆಧಾರ್ ಕಾರ್ಡ್ ನ ವಿಳಾಸ ನಮ್ಮ ಊರಿನದು ಇದೆ ಎಂದು ನುಡಿಯುತ್ತಾರೆ. ತನಿಖಾ ಕಾಲದಲ್ಲಿ ಪೊಲೀಸರು ನನ್ನ ಆಧಾರ್ ಕಾರ್ಡನ್ನು ಪಡೆದುಕೊಂಡಿಲ್ಲ. ನಮ್ಮ ತಂದೆ ರಾಮೇಗೌಡರಿಗೆ 3 ಜನ ಮಕ್ಕಳು. ಮೊದಲಿನವರ ಹೆಸರು ಗೋಪಿ, 2 ನೇಯವರ ಹೆಸರು ವಿಶ್ವನಾಥ್ ಹಾಗೂ ನಾನು ಕೊನೆಯ ಮಗ. ನನ್ನ ಅಣ್ಣಂದಿರಾದ ಗೋಪಿ ಮತ್ತು ವಿಶ್ವನಾಥ್ ಬೆಂಗಳೂರಿನಲ್ಲಿ ವಾಸ ಇದ್ದಾರೆ. ನನ್ನ ಅಣ್ಣಂದಿರು ಇಬ್ಬರು ಬೆಂಗಳೂರಿನಲ್ಲಿ ವಾಸ ಇರುವುದರಿಂದ , ನಾನು ಮತ್ತು ನನ್ನ ತಾಯಿ ಸಹಾ ಬೆಂಗಳೂರಿನಲ್ಲಿ ವಾಸ ಇದ್ದೇವೆ ಎಂದರೆ ಸಾಕ್ಷಿಯು ನನ್ನ ತಾಯಿ ಬೆಂಗಳೂರಿನಲ್ಲಿ ವಾಸ ಇದ್ದಾರೆ, ನಾನು ಊರಿನಲ್ಲಿ ವಾಸ ಇದ್ದೀನಿ ಎಂದು ಹೇಳುತ್ತಾರೆ. ನಾನು ಕೃಷ್ಣಾಪುರ ಊರಿನಲ್ಲಿ ವಾಸ ಇದ್ದೇನೆ ಅಂತ ತೋರಿಸುವುದಕ್ಕಿಂತ ನನ್ನ ಆಧಾರ್ ಕಾರ್ಡ್ ಮತ್ತು ರೇಷನ್ ಕಾರ್ಡ್‌ಗಳನ್ನು ಕೊಟ್ಟಿದ್ದೇನೆ.

ನನ್ನ ತಂದೆಗೆ ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಹೋಬಳಿ ಕೃಷ್ಣಾಪುರ ಗ್ರಾಮದಲ್ಲಿ 3 ವರೆ ಎಕರೆ ಜಮೀನು ಇದೆ. ಸದರಿ ಜಮೀನಿನ ಸರ್ವೆ ನಂಬರ್ ಗೊತ್ತಿಲ್ಲ. ಹಾಗೂ ಯಾವ ಯಾವ ಸರ್ವೆ ನಂಬರ್ ಜಮೀನಿನಲ್ಲಿ ಎಷ್ಟು ಎಕರೆ ಜಮೀನು ಇದೆ ಅಂತ ಗೊತ್ತಿಲ್ಲ, ಒಟ್ಟಾರೆ 3 ವರೆ ಎಕರೆ ಜಮೀನು ಇದೆ. ನನ್ನ ತಂದೆ ತೀರಿಕೊಂಡ ನಂತರ ಪೌತಿ ಖಾತೆ ಆಧಾರದ ಮೇರೆಗೆ ಜಮೀನುಗಳ ಖಾತೆ ನನ್ನ ತಾಯಿ ಹೆಸರಿಗೆ ವರ್ಗಾವಣೆ ಆಗಿದೆ ಎಂದರೆ ಸರಿ. ಸರ್ವೆ ನಂ.35/6 ಪಿ ನಲ್ಲಿ 35 ಗುಂಟೆ ಜಮೀನು ಇದೆ ಎಂದರೆ ಸರಿ. ಸರ್ವೆ ನಂ.28/1 ಡಿಪಿ2 ರಲ್ಲಿ 34 ಗುಂಟೆ ಜಮೀನು ಇದೆ ಎಂದರೆ ಸಾಕ್ಷಿಯು ಆರ್.ಟಿ.ಸಿಯಲ್ಲಿ ಆ ರೀತಿ ಬರೆದಿದೆ ಎಂದು ಹೇಳುತ್ತಾರೆ. ಸರ್ವೆ ನಂ.28/1 ಡಿಪಿ2 ರಲ್ಲಿ 34 ಗುಂಟೆ ಜಮೀನು ನನ್ನ ತಾಯಿ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ಸರ್ವೆ ನಂ.19/ಪಿ2 ರಲ್ಲಿ 1 ಎಕರೆ ಜಮೀನು ನನ್ನ ತಾಯಿ ಹೆಸರಿನಲ್ಲಿ ಇದೆ ಎಂದರೆ ಸರಿ. ಸರ್ವೆ ನಂ.29/1 ಡಿ ರಲ್ಲಿ 38 ಗುಂಟೆ ಜಮೀನು ನನ್ನ ತಾಯಿ ಹೆಸರಿನಲ್ಲಿ ಇದೆ ಎಂದರೆ ಸರಿ. ಸರ್ವೆ ನಂ.19/ಪಿ2 ರ ಜಮೀನು ಹಾಗೂ ಸರ್ವೆ ನಂ.29/1 ಡಿ ರಲ್ಲಿ ಇರುವ ಜಮೀನಿಗೆ ಆರ್.ಟಿ.ಸಿ ಗಳನ್ನು ನೆಲ್ಲಿಗೆರೆ ಸೊಸೈಟಿಯಲ್ಲಿ ಆಧಾರವಾಗಿ ಇಟ್ಟು ಸಾಲವನ್ನು ತೆಗೆದುಕೊಂಡಿದ್ದೇವೆ ಎಂದರೆ ಸರಿ. ಈ ಮೇಲೆ ಹೇಳಿರುವ ಎಲ್ಲಾ ಆಸ್ತಿಗಳು ನಮ್ಮ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ಸಾಲವನ್ನು ಪಡೆದುಕೊಳ್ಳುವ ಸಮಯದಲ್ಲಿ ನನ್ನ ಅಣ್ಣಂದಿರಾದ ಗೋಪಿ ಮತ್ತು ವಿಶ್ವನಾಥ್ ರವರನ್ನು ನಾವು ಸಂಪರ್ಕಿಸಿರಲಿಲ್ಲ ಎಂದರೆ ಸರಿ. ನನ್ನ ತಂದೆ ರಾಮೇಗೌಡ ತೀರಿಕೊಂಡು 9 ವರ್ಷಗಳು ಆಗಿವೆ.

ನಾನು S.S.L.C ಓದಿದ್ದೇನೆ. ಮೇಲೆ ಹೇಳಿರುವ ಜಮೀನುಗಳು ಅಲ್ಲದೆ ಕೃಷ್ಣಾಪುರ ಗ್ರಾಮದಲ್ಲಿ , ನಮ್ಮ ಪಿತ್ರಾರ್ಜಿತ ಆಸ್ತಿಗಳಾದ ಸೈಟುಗಳು ಇದೆ ಎಂದರೆ ಸರಿ. ಮೇಲೆ ಹೇಳಿದ ಪಿತ್ರಾರ್ಜಿತ ಆಸ್ತಿಗಳಿಗೆ, ಆರೋಪಿಯ ತಂದೆ ಮತ್ತು ನನ್ನ 2 ನೇ ಅಣ್ಣ ವಿಶ್ವನಾಥ್ ಪಂಚಾಯಿತಿದಾರರನ್ನು ಸೇರಿಸಿ ಹಲವಾರು ಬಾರಿ ಬಂದು ಆಸ್ತಿಯಲ್ಲಿ ಭಾಗ ಕೊಡುವಂತೆ ನಮಗೆ ಕೇಳಿದ್ದರು ಎಂದರೆ ಸರಿಯಲ್ಲ. ಅವರು ನಮಗೆ ಭಾಗ ಕೇಳಿದ್ದರೂ ಸಹಾ , ನಾನು ಭಾಗ ಕೇಳಿರಲಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬೆಂಗಳೂರಿನಲ್ಲಿ ವಾಸ ಇದ್ದ ಸಂದರ್ಭದಲ್ಲಿ , ಕೆಲಸಕ್ಕೆ ಹೋಗುತ್ತಿರಲಿಲ್ಲ. ನನ್ನ ತಾಯಿ ಫಿಲಂ ಶೂಟಿಂಗ್ ಗೆ ಹೋಗುತ್ತಿದ್ದರು. ಮೇಲೆ ಹೇಳಿದ ಪಿತ್ರಾರ್ಜಿತ ಆಸ್ತಿಗಳಿಂದ ಬರುತ್ತಿದ್ದ ಆದಾಯ ಎಲ್ಲವನ್ನು ನಾನು ಮತ್ತು ನನ್ನ ತಾಯಿ ತೆಗೆದುಕೊಳ್ಳುತ್ತಿದ್ದೆವು ಎಂದರೆ  ಸಾಕ್ಷಿಯು ನಮ್ಮ ತಾಯಿ ಮಾತ್ರ ತೆಗೆದುಕೊಳ್ಳುತಿದ್ದರು ಎಂದು ಹೇಳುತ್ತಾರೆ. ನನ್ನ ಜೀವನಕ್ಕೆ ತೆಂಗಿನ ತೋಟದ ಕಾಯಿಗಳನ್ನು ಮಾರುತ್ತಿದ್ದೆನು.  ನಮ್ಮ ಪಿತ್ರಾರ್ಜಿತ ಆಸ್ತಿಗಳಲ್ಲಿ ತೆಂಗಿನ ತೋಟದಲ್ಲಿ ಇದ್ದ ಎಲ್ಲಾ ಕಾಯಿಗಳನ್ನು ಕಿತ್ತುಕೊಂಡು ಹೋಗಿ ಮಾರಾಟ ಮಾಡಿ ಜೀವನ ಮಾಡುತ್ತಿದ್ದೆನು ಎಂದರೆ ಸರಿ. ಆರೋಪಿ ನನ್ನ ಅಣ್ಣ ಗೋಪಿರವರ ಮಗ ಎಂದರೆ ಸರಿ.  ಆರೋಪಿ ಬೆಂಗಳೂರಿನ ಮಹೇಶ್ ಪಿ.ಯು ಕಾಲೇಜಿನಲ್ಲಿ ಕೆಲಸ ಮಾಡುತ್ತಾರೆ ಎಂದರೆ ಗೊತ್ತಿಲ್ಲ.  ಆರೋಪಿ ನನ್ನ ಸ್ವಂತ ಅಣ್ಣನ ಮಗನಾಗಿರುವುದರಿಂದ, ಆತ ಎಲ್ಲಿ ಏನು ಕೆಲಸ ಮಾಡುತ್ತಾನೆ ಎಂಬುದರ ಬಗ್ಗೆ ನನಗೆ ಸಂಪೂರ್ಣ ನಿಖರವಾದ ಮಾಹಿತಿ ಇದ್ದರೂ ಸಹಾ, ಆರೋಪಿ ಏನು ಕೆಲಸ ಮಾಡುತ್ತಿದ್ದಾನೆ ಅಂತ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ದೊಡ್ಡ ಅಣ್ಣ ಗೋಪಿ, ಬೆಂಗಳೂರಿನಲ್ಲಿ ಜೀವನ ನಡೆಸಲು ಕಷ್ಟವಾಗಿರುವುದರಿಂದ, ಊರಿಗೆ  ಬಂದು ಕೃಷ್ಣಾಪುರ ಗ್ರಾಮದಲ್ಲಿ ಮನೆ ಕಟ್ಟಲು ಹೋದಾಗ ನಾನು ಮತ್ತು ನನ್ನ ತಾಯಿ ಇಬ್ಬರು ಅದನ್ನು ತಡೆಹಿಡಿದಿದ್ದೆವು ಎಂದರೆ ಸಾಕ್ಷಿಯು ನಾನು ತಡೆ ಮಾಡಿರಲಿಲ್ಲ, ನನ್ನ ತಾಯಿ ತಡೆಹಿಡಿದಿದ್ದರು ಎಂದು ಉತ್ತರಿಸುತ್ತಾರೆ. ನಾನು ಸಹಾ ತಡೆ ಹಿಡಿದಿದ್ದೆನು ಎಂದರೆ  ಸರಿಯಲ್ಲ. ನಾನು, ನನ್ನ ತಾಯಿಯನ್ನು ಶರೀಕ್ ಮಾಡಿಕೊಂಡು ನನ್ನ ಅಣ್ಣಂದಿರಾದ ವಿಶ್ವನಾಥ್ ಮತು ಗೋಪಿರವರಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಭಾಗ ಬರದಂತೆ ನೋಡಿಕೊಳುಳತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೃಷ್ಣಾಪುರದಲ್ಲಿ ಬಾಡಿಗೆ ಮನೆಯಲ್ಲಿ ವಾಸ ಇದ್ದೇನೆ . ಬಾಡಿಗೆ ಮನೆಯ ಮಾಲೀಕರ ಹೆಸರು ಕೆಂಪಣ್ಣ. ಸದರಿ ಬಾಡಿಗೆ ಮನೆಯ ಕರಾರು ಪತ್ರ ನನ್ನ ತಾಯಿಯ ಹೆಸರಿನಲ್ಲಿ ಆಗಿದೆ, ನನ್ನ ಹೆಸರಿನಲ್ಲಿ ಆಗಿಲ್ಲ. ತನಿಖಾ ಸಂದರ್ಭದಲ್ಲಿ, ಪೊಲೀಸರಿಗೆ ಬಾಡಿಗೆ ಕರಾರು ಪತ್ರವನ್ನು ಕೊಟ್ಟಿಲ್ಲ.  ಬಾಡಿಗೆ ಕರಾರು ಪತ್ರವನ್ನು ಪೊಲೀಸರು ಕೊಡುವಂತೆ ನಮಗೆ ಕೇಳಲಿಲ್ಲ. ಆಗ ನಾನು ಆಸ್ಪತ್ರೆಯಲ್ಲಿ ಇದ್ದೆನು. ನಮ್ಮ ಬಾಡಿಗೆ ಮನೆಯ ಅಕ್ಕಪಕ್ಕದಲ್ಲಿ ಬೋರೆಗೌಡ ರವರ ಮನೆ, ಶಂಕರಾಚಾರರ ಮನೆ ಇದೆ . ಈಗ ನನಗೆ ತೋರಿಸಿದ ನಿಪಿ.9 ಫೋಟೋದಲ್ಲಿ ಇರುವ ಬಾಡಿಗೆ

ಮನೆಯಲ್ಲಿ ನಾನು ವಾಸವಾಗಿದ್ದೆನು. ಮೇಲೆ ಹೇಳಿದ ಶಂಕರಾಚಾರರ ಮನೆ ನಮ್ಮ ಬಾಡಿಗೆ ಮನೆಯ ಪಕ್ಕದಲ್ಲಿ ಇದೆ. ಶಂಕರಾಚಾರರ ಮನೆ ಪಕ್ಕದಲ್ಲಿ ಈಗ ಹೊಸದಾಗಿ ಬಂದಿರುವ ಉಮೇಶ್ ರವರ ಮನೆ ಇದೆ.ನಾನು ಮೇಲೆ ಹೇಳಿದ ಬೋರೆಗೌಡರ ಮನೆ ನಮ್ಮ ಬಾಡಿಗೆ ಮನೆಯಿಂದ ದೂರದಲ್ಲಿ ಇದೆ ಎಂದರೆ ಸರಿಯ್ಲುಲ. ನಾವು ವಾಸ ಇರುವ ಬಾಡಿಗೆ ಮನೆಯಿಂದ 30 ಅಡಿ ದೂರದಲ್ಲಿ ಬೋರೆಗೌಡರವ ಮನೆ ಇದೆ. ಶಂಕರಾಚಾರರ ಮನೆಯಲ್ಲಿ , ಶಂಕರಾಚಾರರು ಮತ್ತು ಅವರ ಹೆಂಡತಿ ವಾಸ ಇದ್ದಾರೆ .ಬೋರೆಗೌಡರ ಮನೆಯಲ್ಲಿ ಅವರ ಹೆಂಡತಿ ಮಗ ಅಂದರೆ 3 ಜನ ವಾಸ ಇದ್ದಾರೆ .

ದಿನಾಂಕ 04.05.2020 ರಂದು ಗಲಾಟೆ ಆಗಿತ್ತು. ನಿಪಿ.6, 7 , 8 ಮತ್ತು 9 ಫೋಟೋಗಳಲ್ಲಿ ವಿದ್ಯುಚ್ಚಕ್ತಿ ಕಂಬ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.6, 7 , 8 ಮತ್ತು 9 ಫೋಟೋಗಳಲ್ಲಿ ವಿದ್ಯುಚ್ಚಕ್ತಿ ಕಂಬ ಇದ್ದರೂ ಸಹಾ, ಕಂಬ ಇಲ್ಲ ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಲಟೆಯಾದ ಸಮಯದಲ್ಲಿ ಶಂಕರಚಾರರು, ಅವರ ಹೆಂಡತಿ, ಮಗ ಮತ್ತು ಬೋರಗೌಡರ ಮನೆಯಲ್ಲಿ ಅವರ ಹೆಂಡತಿ , ಮಗ ಮನೆಯಲ್ಲಿ ಇದ್ದರು. ಗಲಾಟೆ ನಡೆದ ಸಮಯ ರಾತ್ರಿ 10.30 ಗಂಟೆ ಆಗಿತ್ತು.ಗಲಾಟೆ ನಡೆದ ಸ್ಥಳದಲ್ಲಿ ಯಾರು ಇರಲಿಲ್ಲ ಎಂದರೆ ಸರಿ. ಆರೋಪಿ ನಮ್ಮ ತಾಯಿಗೆ ಆಸ್ತಿಯಲ್ಲಿ ಭಾಗ ಕೊಡಿ ಅಂತ ಕೇಳುತ್ತಿದ್ದ ವಿಷಯವನ್ನು ನಾನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ. ಆರೋಪಿ ಎಂದಿಗೂ ನಮ್ಮ ತಾಯಿಗೆ ಆಸ್ತಿಯಲ್ಲಿ ಬಾಗ ಕೊಡಿ ಅಂತ ಕೇಳಿಲ್ಲದೆ ಇದ್ದರೂ ಸಹಾ, ನಾನು ದುರುದ್ದೇಶಪೂರ್ವಕವಾಗಿ ಆರೋಪಿ, ನಮ್ಮ ತಾಯಿಗೆ ಆಸ್ತಿಯಲ್ಲಿ ಭಾಗ ಕೊಡಿ ಅಂತ ಕೇಳುತ್ತಿದ್ದನು ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಾಯಿ ಇಬ್ಬರು , ಚಾಸಾ.1 ರವರಿಗೆ ಆರೋಪಿ ಬಂದು ಆಸ್ತಿಯಲ್ಲಿ ಭಾಗ ಕೊಡಿ ಅಂತ ಕೇಳುತ್ತಿದ್ದನು ಎಂಬ ವಿಚಾರವನ್ನು ಚಾಸಾ.1 ರವರಿಗೆ ತಿಳಿಸಿದ್ದೇವೆ ಎಂಬ ಅಂಶವನ್ನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. "ಆರೋಪಿ ಕೃಷ್ಣಪುರಕ್ಕೆ ಅವರಿಗೆ ಬೇಕಾಗಿದ್ದಾಗ ಬಂದು ಹೋಗುತ್ತಾನೆ, ತೋಟದಿಂದ ತೆಂಗಿನಕಾಯಿ ತೆಗೆದುಕೊಂಡು ಹೋಗುತ್ತಾನೆ. ನಾನು, ಆರೋಪಿಗೆ ಕಾಯಿಯನ್ನು ತೆಗೆದುಕೊಂಡು ಹೋಗುವ ಬಗ್ಗೆ ಏನು ಕೇಳಿರಲಿಲ್ಲ" ಅಂತ ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರವನ್ನು ಪೊಲೀಸರ ಮುಂದೆ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. ನಾನು ಪೊಲೀಸರು ಮುಂದೆ "2 ವರ್ಷಗಳ ಹಿಂದೆ ಸಂಜೆ 5.00 ಗಂಟೆ ಮೇಲೆ ಆರೋಪಿ, ದೇವಸ್ಥಾನಕ್ಕೆ ಕಾಯಿ ಬೇಕು ಅಂತ ಬಂದು ನನ್ನನ್ನು ಕೇಳಿದರು, ತೋಟದಿಂದ ಕಾಯಿಗಳನ್ನು ಕಿತ್ತುಕೊಂಡು ಹೋಗಿ ಅಂತ ಆರೋಪಿಗೆ ಹೇಳಿದೆನು " ಅಂತ ಹೇಳಿಲ್ಲ ಎಂದರೆ ಸರಿಯಲ್ಲ. "ಆರೋಪಿ 120 ತೆಂಗಿನ ಕಾಯಿಗಳನ್ನು ಕಿತ್ತಿದ್ದನು " ಅಂತ ನಾನು ಪೊಲೀಸರ ಮುಂದೆ

ಹೇಳಿದ್ದೇನೆ. ನಾನು ಪೊಲೀಸರ ಮುಂದೆ "ಆರೋಪಿ 120 ತೆಂಗಿನ ಕಾಯಿಗಳನ್ನು ಕಿತ್ತಿದ್ದನು " ಅಂತ ಹೇಳಿಲ್ಲ ಎಂದರೆ ಸರಿಯಲ್ಲ.

ಆರೋಪಿ ಬೆಂಗಳೂರಿನಲ್ಲಿ ಪಿ.ಯು. ಕಾಲೇಜಿನಲ್ಲಿ ಕೆಲಸ ಮಾಡಿಕೊಂಡಿರುವುದರಿಂದ, ಆತನಿಗೆ ತೆಂಗಿನ ಮರಗಳನ್ನು ಹತ್ತುವುದು ಗೊತ್ತಿರುವುದಿಲ್ಲ ಎಂದರೆ ಸಾಕ್ಷಿಯು ಆರೋಪಿ ಏನು ಕೆಲಸ ಮಾಡುತ್ತಿದ್ದಾನೆ ಅಂತ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಆರೋಪಿಗೆ ತೆಂಗಿನ ಮರಗಳನ್ನು ಹತ್ತುವುದು ಬರುವುದಿಲ್ಲ ಎಂದರೆ ಸಾಕ್ಷಿಯು, ಆರೋಪಿ , ಕಾಯಿ ಕೀಳುವ ಜವಳಿ ಕುಡುಗೋಲುನಿಂದ ತೆಂಗಿನ ಕಾಯಿಗಳನ್ನು ಕೀಳುತ್ತಿದ್ದನು ಎಂದು ಸಾಕ್ಷಿ ಹೇಳುತ್ತಾರೆ. ನಾನು ಪೊಲೀಸರ ಮುಂದೆ ಹೇಳಿಕೆಯಲ್ಲಿ , ಆರೋಪಿ ಕಾಯಿ ಕೀಳುವ ಜವಳಿ ಕುಡುಗೋಲಿನಿಂದ ಕಾಯಿ ಕೀಳುತ್ತಿದ್ದನು ಎಂದು ಹೇಳಿದ್ದೇನೆ. ಹಳ್ಳಿಗಳಲ್ಲಿ ರೈತರು ಕೆಲಸ ಕಾರ್ಯಕ್ಕೆ ಬಳಸುವಂತಹ ಉಪಕರಣಗಳು ಗೊತ್ತಿದೆ. ಸಾಕ್ಷಿಯು ಹೇಳುತ್ತಾರೆ ಕುಡುಗೋಲು ಬೇರೆ ಜವಳಿ ಕುಡುಗೋಲು ಬೇರೆ, ಇವರೆಡು ಒಂದೇ ತರಹ ಅಲ್ಲ ಎಂದು ನುಡಿಯುತ್ತಾರೆ. ನಾನು ಪೊಲೀಸರ ಮುಂದೆ ಹೇಳಿಕೆಯಲ್ಲಿ "ಆರೋಪಿ ಜವಳಿ ಕುಡುಗೋಲಿನಿಂದ ತೆಂಗಿನ ಕಾಯಿಗಳನ್ನು ಕೀಳುತ್ತಿದ್ದನು ಹಾಗೂ ಆತನ ಜೊತೆ ಇನ್ನೊಬ್ಬರು ಇದ್ದರು" ಅಂತ ಹೇಳಿದ್ದೇನೆ. ಆರೋಪಿ ಜೊತೆಯಲ್ಲಿ ಇದ್ದ ವ್ಯಕ್ತಿಯ ಹೆಸರು ಗೊತ್ತಿಲ್ಲ. "ಆರೋಪಿ ಜವಳಿ ಕುಡುಗೋಲಿನಿಂದ ತೆಂಗಿನ ಕಾಯಿಗಳನ್ನು ಕೀಳುತ್ತಿದ್ದನು ಹಾಗೂ ಆತನ ಜೊತೆ ಇನ್ನೊಬ್ಬರು ಇದ್ದರು" ಅಂತ ನಾನು ಪೊಲೀಸರ ಮುಂದೆ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ನನಗೂ ಸಹಾ, ಜವಳಿ ಕುಡುಗೋಲನ್ನು ಬಳಸಿ ತೆಂಗಿನಕಾಯಿಗಳನ್ನು ಕೀಳಲು ಬರುತ್ತದೆ ಎಂದರೆ ಸರಿ. ನಾವು ತೆಂಗಿನ ಕಾಯಿಗಳನ್ನು ಕಿತ್ತ ಮೇಲೆ , ಅವುಗಳನ್ನು ಸುಲಿದುಕೊಂಡು ಬೆಂಗಳೂರಿಗೆ ತೆಗೆದುಕೊಂಡು ಹೋಗುತ್ತೇನೆ ಎಂದರೆ ಸಾಕ್ಷಿಯು, ನನ್ನ ತಾಯಿ ಹೇಳಿದರೆ ಮಾತ್ರ ತೆಂಗಿನ ಕಾಯಿಗಳನ್ನು ಬೆಂಗಳೂರಿಗೆ ತೆಗೆದುಕೊಂಡು ಹೋಗುತ್ತೇನೆ ಎಂದು ಹೇಳುತ್ತಾರೆ.

ಎಳನೀರುಗಳನ್ನು ಕೊಚ್ಚುವುದಕ್ಕೆ ನನಗೆ ಬರುತ್ತದೆ ಎಂದರೆ ಸಾಕ್ಷಿಯು ಅಷ್ಟಾಗಿ ಬರುವುದಿಲ್ಲ ಎಂದು ಉತ್ತರಿಸುತ್ತಾರೆ. ನನಗೆ ಎಳನೀರುಗಳನ್ನು ಚೆನ್ನಾಗಿ ಕೊಚ್ಚಲು ಬರುತ್ತದೆ ಎಂದರೆ ಸರಿಯಲ್ಲ ಹಾಗೂ ನಾನು ಎಳನೀರುಗಳನ್ನು ಮಾರಾಟ ಮಾಡುತ್ತೇನೆ ಎಂದರೆ ಸರಿಯಲ್ಲ. ಎಳನೀರನ್ನು ಚೆನ್ನಾಗಿ ಕೊಚ್ಚಲು ನನಗೆ ಗೊತ್ತಿದ್ದರೂ ಸಹಾ ನಾನು ಎಳನೀರು ಚೆನ್ನಾಗಿ ಕೊಚ್ಚಲು ಬರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆ ಹೇಳಿಕೆಯಲ್ಲಿ "ರಾತ್ರಿ ಸುಮಾರು 12.00 ಗಂಟೆಯಲ್ಲಿ ನಾನು ಮನೆಯಲ್ಲಿ ಇದ್ದೆ , ಆಗ ಆರೋಪಿ ಮನೆ ಹತ್ತಿರ ಬಂದು ಕೆಟ್ಟದ್ದಾಗಿ ಬಾಗಿಲು ತೆಗೆಯೋ ಎಂದು ಬೈಯುತ್ತಿದ್ದನು" ಅಂತ ಹೇಳಿದ್ದೇನೆ ಎಂದರೆ ಸಾಕ್ಷಿಯು

12.00 ಗಂಟೆ ಅಂತ ಹೇಳಿಲ್ಲ , ರಾತ್ರಿ 10.30 ಗಂಟೆ ನಂತರ ಎಂದು ಹೇಳಿದ್ದೇನೆ ಎಂದು ಉತ್ತರಿಸುತ್ತಾರೆ. ನಾನು S.S.L.C ಯನ್ನು ಓದಿದ್ದೇನೆ. ಆರೋಪಿ ರಾತ್ರಿ ಸಮಯದಲ್ಲಿ ನಮ್ಮ ಮನೆ ಹತ್ತಿರ ಬಂದು ಕೆಟ್ಟದಾಗಿ ಬಾಗಿಲು ತೆಗೆಯೋ ಎಂದು ಬೈಯುತ್ತಿದ್ದಾಗ ಅಕ್ಕ ಪಕ್ಕದ ಜನರು ಯಾರು ಇರಲಿಲ್ಲ ಎಂದರೆ ಸರಿ. ಹಳ್ಳಿಗಳಲ್ಲಿ ಸಾಮಾನವಾಗಿ ಗಲಾಟೆ ಆಗುತ್ತಿದ್ದಾಗ ಜನರು ಅಲ್ಲಿ ಸೇರಿಕೊಳ್ಳುತ್ತಾರೆ ಎಂದರೆ ಸರಿಯಲ್ಲ. ಆರೋಪಿ ನನಗೆ ಬೈಯುತ್ತಿದುದ್ದನ್ನು ಅಕ್ಕ ಪಕ್ಕದ ಮನೆಯವರುನೋಡಿರುವುದಿಲ್ಲ, ಕಾರಣ ಆಗರಾತ್ರಿ ವೇಳೆಯಾಗಿತ್ತು . ಆರೋಪಿ ನಮ್ಮ ಮನೆ ಹತ್ತಿರ ಬಂದು ರಾತ್ರಿ ನನಗೆ ಕೆಟ್ಟದಾಗಿ ಬೈಯುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆ ಹೇಳಿಕೆಯಲ್ಲಿ " ನಾನು ಬಾಗಿಲನು ತೆಗೆದೆನು, ಆರೋಪಿ ಓಡಿಬಂದು ಕುಡುಗೋಲನ್ನು ನನ್ನ ಕುತ್ತಿಗೆಗೆ ಬೀಸಿದಾಗ, ನಾನು ನನ್ನ ಕೈಯನ್ನು ಅಡ್ಡ ಕೊಟ್ಟಿದ್ದಾಗ, ಕುಡುಗೋಲಿನಿಂದ ನನ್ನ ಬಲಗೈಗೆ ರಕ್ತಗಾಯವಾಯಿತು. ಆರೋಪಿ ಕುಡುಗೋಲನ್ನು ನನ್ನ ತಲೆಗೂ ಬೀಸಿದನು, ನನ್ನ ಹಣೆಗೆ ಗಾಯವಾಯಿತು" ಅಂತ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಸದರಿ ಘಟನೆಯನ್ನು ನಮ್ಮ ಗ್ರಾಮದವರು ಯಾರು ನೋಡಿರುವುದಿಲ್ಲ.

ಗಲಾಟೆಯಾಗಿದ್ದ ವಿಚಾರವನ್ನು , ಚಾಸಾ.1 ಆಸ್ಪತ್ರೆಯಲ್ಲಿ ವೈದ್ಯರಿಗೆ ಹೇಳಿದ್ದರು ಎಂದರೆ ಸರಿ. ಘಟನಾ ಸ್ಥಳದಿಂದ , ನನ್ನನ್ನು ಚಾಸಾ.1 ಆಸ್ಪತ್ರೆಗೆ ಕರೆದುಕೊಂಡು ಹೋದರು. ಮೂರ್ತಿ ಮತ್ತು ಶಂಕರ, ನನ್ನನ್ನು ಬೆಂಗಳೂರಿನ ಲಕ್ಷ್ಮಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಆದಿಚುಂಚನಗಿರಿ ಆಸ್ಪತ್ರೆಗೆ ಬೋರೆಗೌಡರು ಬಂದಿರಲಿಲ್ಲ. ಬೆಂಗಳೂರು ಆಸ್ಪತ್ರೆಯಲ್ಲಿ , ರಕ್ತಸಿಕ್ತವಾದ್ದ ನನ್ನ ಬಟ್ಟೆಯನ್ನು ವೈದ್ಯರು ಬಿಚ್ಚಿದರು. ವೈದರು ನನ್ನನ್ನು ಆಪರೇಷನ್ ಥಿಯೇಟರ್ ಗೆ ಕರೆದುಕೊಂಡು ಹೋಗಿದ್ದರಿಂದ ಬಟ್ಟೆಯನ್ನು ಏನು ಮಾಡಿದರು ಅಂತ ನನಗೆ ಗೊತ್ತಿಲ್ಲ. ಬೆಂಗಳೂರಿನ ಲಕ್ಷ್ಮಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ 15 ದಿವಸ ಅಡ್ಮಿಟ್ ಆಗಿದ್ದೆನು. ಆಸ್ಪತ್ರೆಯಿಂದ ಡಿಸ್ಚಾರ್ಜ್ ಆದ ಮೇಲೆ ನನ್ನ ತಾಯಿಯ ಜೊತೆಯಲ್ಲಿ ಬೆಂಗಳೂರಿನ ಮನೆಯಲ್ಲಿ ಇದ್ದೆನು. ಡಿಸ್ಚಾರ್ಜ್ ಆದ ಮೇಲೆ ಬೆಂಗಳೂರಿನಲ್ಲಿ ಒಂದು ವರ್ಷ ಇದ್ದೆ. ಪೊಲೀಸರು ನಾನು ಹೇಳಿದ ಹೇಳಿಕೆಯನ್ನು ಬರೆದುಕೊಂಡರು. ನಾನು ಹೇಳಿಕೆ ಕೊಡುವ ಸಂದರ್ಭದಲ್ಲಿ ಆಸ್ಪತ್ರೆಯಲ್ಲಿ ನಾನು ಒಬ್ಬನೇ ಇದ್ದೆನು. ಪೊಲೀಸರು ಬರೆದುಕೊಂಡಿದ್ದ ನನ್ನ ಹೇಳಿಕೆಯನ್ನು ನಂತರ ನಾನು ಓದಲಿಲ್ಲ ಎಂದರೆ ಸರಿ. ಆಸ್ಪತ್ರೆಯಲ್ಲಿ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಪೊಲೀಸರು ಶರೀಕಾಗಿ, ನಿಪಿ.1 ನನ್ನ ಹೇಳಿಕೆಯನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿ ಗಲಾಟೆ ವೇಳೆಯಲ್ಲಿ ನೀಲಿ ಬಣ್ಣದ ನೈಟ್ ಪ್ಯಾಂಟ್ ಹಾಗೂ ಟೀ ಶರ್ಟ್ ಹಾಕಿದ್ದನು. ಪೊಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ, ಆರೋಪಿ ಗಲಾಟೆ

ಸಮಯದಲ್ಲಿ "ನೀಲಿ ಬಣ್ಣದ ನೈಟ್ ಪ್ಯಾಂಟ್ ಹಾಗೂ ಟೀ ಶರ್ಟ್ ಹಾಕಿಕೊಂಡಿದ್ದ" ಅಂತ ಹೇಳಿರುತ್ತೇನೆ.

ನಾನು ಎಳನೀರನ್ನು ಕೊಚ್ಚುವ ಸಮಯದಲ್ಲಿ ಸ್ವತಃ ಕೈಗೆ ಗಾಯ ಮಾಡಿಕೊಂಡಿದ್ದನ್ನು ದುರುಪಯೋಗಪಡಿಸಿಕೊಂಡು , ಆರೋಪಿ ಯಾವುದೇ ತಪ್ಪನ್ನು ಮಾಡಿಲ್ಲದೆ ಇದ್ದರೂ ಸಹಾ, ಚಾಸಾ.1 ರವರೊಂದಿಗೆ ಸೇರಿ ಆರೋಪಿ ಮೇಲೆ ಸುಳ್ಳು ದೂರನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಜವಳಿ ಕುಡುಗೋಲಿನಿಂದ ತೆಂಗಿನ ಕಾಯಿಗಳನ್ನು ಕೀಳುವ ಸಮಯದಲ್ಲಿ ನನ್ನ ಹಣೆಗೆ ಗಾಯಗಳಾಗಿತ್ತು ಎಂದರೆ ಸರಿಯಲ್ಲ. ಈ ಕೇಸಿಗೋಸ್ಕರ ನಾನು , ಪೊಲೀಸರು, ವೈದ್ಯರು ಸೇರಿಕೊಂಡು ಸುಳ್ಳು ಗಾಯ ಪ್ರಮಾಣ ಪತ್ರ ಮತ್ತು ಎಂ.ಎಲ್.ಸಿ ಯನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾನು ಸ್ವತಃ ಮಾಡಿಕೊಂಡಿದ್ದ ಗಾಯಗಳಿಗೆ, ನಾನು ಮತ್ತು ನನ್ನ ತಾಯಿ ಸೇರಿ ಚಾಸಾ.1 ರವರ ಮೂಲಕ ಆರೋಪಿ ಮೇಲೆ ಸುಳ್ಳು ದೂರನ್ನು ಕೊಡಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪನ್ನು ಮಾಡಿಲ್ಲದೆ ಇದ್ದರೂ ಸಹಾ, ಆತನಿಗೆ ನ್ಯಾಯಾಲಯದಲ್ಲಿ ಶಿಕ್ಷೆ ಆಗಬೇಕು ಎಂಬ ಉದ್ದೇಶದಿಂದ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಅವರ ತಂದೆ ಮೂಲಕ ಬರಬೇಕಾಗಿದ್ದ ಪಿತ್ರಾರ್ಜಿಪಿತ ಆಸ್ತಿಯನ್ನು ತಪ್ಪಿಸುವುದಕ್ಕೋಸ್ಕರ , ಆರೋಪಿ, ಆತನ ತಂದೆ ಮತ್ತು ಕುಟುಂಬದವರಿಗೆ ಭಯ ಪಡಿಸಲು ಸುಳ್ಳು ದೂರನ್ನು ನಾವು ನೀಡಿದ್ದೇವೆ ಎಂದರೆ ಸರಿಯಲ್ಲ. ಕೇಸಿಗೋಸ್ಕರ ಎಂ.ಒ.1 ಮತ್ತು 2 ನ್ನು ಪೊಲೀಸರೊಂದಿಗೆ ಶರೀಕಾಗಿ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿ ನನ್ನನ್ನು ಸಾಯಿಸಬೇಕು ಎಂಬ ಉದ್ದೇಶದಿಂದ ಕುಡುಗೋಲನ್ನು ಬೀಸಿದನು ಅಂತ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ತಾಯಿ, ಚಾಸಾ.1, ಪೊಲೀಸರು, ವೈದ್ಯರು ಎಲ್ಲರು ಶರೀಕಾಗಿ ಕೇಸಿಗೋಸ್ಕರ ಸುಳ್ಳು ದಾಖಲೆಗಳನ್ನು, ಮುದ್ದೆಮಾಲುಗಳನ್ನುಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿ ರಾತ್ರಿ 12.00 ಗಂಟೆಯಲ್ಲಿ ನಮ್ಮ ಮನೆ ಹತ್ತಿರ ಬಂದು ಬಾಗಿಲು ತೆಗೆಯೋ ಅಂತ ಕೆಟ್ಟದಾಗಿ ಬೈದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನನ್ನು ಕೊಲೆ ಮಾಡುವುದಕ್ಕೆ ಪ್ರಯತ್ನ ಪಟ್ಟಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ಕುಡುಗೋಲನ್ನು ನನ್ನ ತಲೆಗೆ ಮತ್ತು ಕೈಗೆ ಬೀಸಿರಲಿಲ್ಲ ಎಂದರೆ ಸರಿಯಲ್ಲ. ಹಾಗೂ ಕುಡುಗೋಲಿನಿಂದ ನನ್ನ ಹಣೆಗೆ ಗಾಯಗಳು ಆಗಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ಮೇಲೆ ಗಲಾಟೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ನಿಂದಿಸಿಲ್ಲ , ಕೊಲೆ ಬೆದರಿಕೆಯನ್ನು ಹಾಕಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರೊಂದಿಗೆ

ಶರೀಕಾಗಿ ಆರೋಪಿತರನ ವಿರುದ್ದ ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸುವಂತೆ ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಏನು ಇಲ್ಲ.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.

ಸರ್ಕಾರಿ ಅಭಿಯೋಜಕರು ಪಿಡಬ್ಲ್ಯೂ-1 ರವರ ಹೆಚ್ಚಿನ ಮುಂದುವರಿದ ಮುಖ್ಯ ವಿಚಾರಣೆಗಾಗಿ ಮೌಖಿಕವಾಗಿ ನ್ಯಾಯಾಲಯದ ಅನುಮತಿಯನ್ನು ಕೋರಿದ್ದು ನೀಡಲಾಯಿತು.

ಮುಂದುವರಿದ ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ಘಟನೆಯ ದಿವಸ, ಆರೋಪಿಯು ಬಲವಾಗಿ ಕುಡುಗೋಲನ್ನು ನನಗೆ ಬೀಸಿದಾಗ ನನ್ನ ಬಲಗೈನ ಮೊಣಕೈ ಮುಂದೆ ಕೈ ಕಟ್ ಆಯಿತು. ವೈದ್ಯರು ಅದಕ್ಕೆ ಶಸ್ತ್ರ ಚಿಕಿತ್ಸೆಯನ್ನು ಮಾಡಿ ಹೊಲಿಗೆಯನ್ನು ಹಾಕಿರುತ್ತಾರೆ. ನನ್ನ ಕೈ ಮೊದಲಿನ ಸ್ಥಿತಿಯಲ್ಲಿ ಇರುವುದಿಲ್ಲ. ಆದ್ದರಿಂದ ಈಗ ಏನು ಕೆಲಸ ಮಾಡಲು ಆಗುವುದಿಲ್ಲ. ಸದರಿ ಶಸ್ತ್ರ ಚಿಕಿತ್ಸೆಗಾಗಿ ರೂ.1,70,000/- ಹಣ ವೆಚ್ಚವಾಗಿದೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್.ಎಂ. ವಕೀಲರಿಂದಃ

ಆರೋಪಿ ನನಗೆ ಯಾವುದೇ ಕುಡುಗೋಲನ್ನು ಬೀಸಿರಲಿಲ್ಲ ಹಾಗೂ ಸದರಿ ಕುಡುಗೋಲಿನಿಂದ ನನ್ನ ಬಲಗೈಗೆ ಯಾವುದೇ ಪೆಟಾಗಿ ಗಾಯಗಳಾಗಿರುವುದಿಲ್ಲ , ಶಸ್ತ್ರ ಚಿಕಿತ್ಸೆ

ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನೇ ಸ್ವತಃವಾಗಿ ಬಲಗೈಗೆ ಗಾಯ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ವೈದ್ಯರು ಹೇಳಿದ ಪ್ರಕಾರ ನಾನು ನನ್ನ ಬಲಗೈಗೆ ಚಿಕಿತ್ಸೆಯನ್ನು ತೆಗೆದುಕೊಂಡಿದ್ದ ಪಕ್ಷದಲ್ಲಿ, ನನ್ನ ಬಲಗೈಗೆ ಯಾವುದೇ ತೊಂದರೆ ಆಗುತ್ತಿರಲಿಲ್ಲ, ಆದರೆ ನಾನು ವೈದ್ಯರು ಹೇಳಿದ ಪ್ರಕಾರ ಚಿಕಿತ್ಸೆಯನ್ನು ತೆಗೆದುಕೊಂಡಿಲ್ಲದೆ ಇರುವುದರಿಂದ ನನ್ನ ಬಲಗೈಗೆ ತೊಂದರೆ ಉಂಟಾಗಿದೆ ಎಂದರೆ ಸರಿಯಲ್ಲ. ನನ್ನ ಬಲಗೈ ಯಿಂದ ಯಾವುದೇ ಕೆಲಸ ಮಾಡುವುದಿಲ್ಲ ಎಂಬುದರ ಬಗ್ಗೆ ವೈದ್ಯರು ಸರ್ಟಿಫಿಕೇಟನ್ನು ಬರೆಸಿ ತನಿಖಾಧಿಕಾರಿಗೆ ಕೊಟ್ಟಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು, ಈ ಬಗ್ಗೆ ಹೇಳಿದ್ದೇನೆ ಎಂದು ಉತ್ತರಿಸುತ್ತಾರೆ. ನನ್ನ ಬಲಗೈಗೆ ಆಗಿರುವ ನ್ಯೂನತೆಯ ಸರ್ಟಿಫಿಕೇಟನ್ನು ನಾನು ತನಿಖಾಧಿಕಾರಿಗೆ ನೀಡಿಲ್ಲ ಎಂದರೆ ಸಾಕ್ಷಿಯು ವೈದ್ಯರು ಕೈಯನ್ನು ಪರೀಕ್ಷಿಸಿ ಸರ್ಟಿಫಿಕೇಟನ್ನು ಕೊಡುವುದಕ್ಕೆ ಸಮಯವನ್ನು ತೆಗೆದುಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ಬಲಗೈಯಿಂದ ಕೆಲಸ ಮಾಡಲು ಆಗುವುದಿಲ್ಲ ಎಂದು ನಾನು ಉತ್ಪ್ರೇಕ್ಷೆಯಿಂದ , ಆರೋಪಿಗೆ ತೊಂದರೆ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಬಲಗೈನ ಶಸ್ತ್ರ ಚಿಕಿತ್ಸೆಗೆ ತಗುಲಿರುವ ವೆಚ್ಚದ ಬಿಲ್ಲುಗಳನ್ನು ಕೊಟ್ಟಿದ್ದೇನೆ. ನಾನು ಪೊಲೀಸರ ಮುಂದೆ ವೆಚ್ಚದ ಬಿಲ್ಲುಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಬಲಗೈಗೆ ಪೆಟ್ಟಾಗಿರುವುದಕ್ಕೆ ಆರೋಪಿ ಪರೋಕ್ಷವಾಗಿ ಅಥವಾ ಪ್ರತ್ಯಕ್ಷವಾಗಿ ಕಾರಣನಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿರುವುದನ್ನು ಬಿಟ್ಟರೆ ಬೇರೆಯವರ ಮುಂದೆ ಘಟನೆ ಬಗ್ಗೆ ಯಾವುದೇ ಮಾತುಕತೆಯನ್ನು ಆಡಿಲ್ಲ ಎಂದರೆ ಸರಿ.

ಮರು ವಿಚಾರಣೆಃ ಏನು ಇಲ್ಲ.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.